## 3 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಹುಬ್ಬಳ್ಳಿ.

**ಸಿ ಸಿ ನಂ.2571/2022**

| ಪಿರ್ಯಾದಿ | ವಿರುದ್ಧ | ಆರೋಪಿತರು |
|---|---|---|
| ಎ.ಪಿ.ಎಂ.ಸಿ ನವನಗರ, ಪೊಲೀಸ್ ಠಾಣೆ | 1) | ಪ್ರಜ್ವಲ ತಂದೆ ಅಡಿವೆಪ್ಪ ದೊಡ್ಡಮನಿ (ಕಾನೂನು ಸಂಘರ್ಷಕ್ಕೆ ಒಳಪಟ್ಟ), ವಯಾಃ 15 ವರ್ಷ , ಸಾಃಯರಿನಾರಾಯಣಪೂರ, ತಾಃಕುಂದಗೋಳ , ಹಾ/ವಃಹನುಮಂತನಗರ ಆದರ್ಶ ಕಾಲೇಜ್ ಹತ್ತಿರ , ಲಿಂಗರಾಜನಗರ , ಹುಬ್ಬಳ್ಳಿ |
| | 2) | ಮಂಜುನಾಥ ತಂದೆ ಬಸವಂತಪ್ಪ ಚಲವಾದಿ (ಕಾನೂನು ಸಂಘರ್ಷಕ್ಕೆ ಒಳಪಟ್ಟ) ವಯಾಃ 10 ವರ್ಷ, ಸಾಃಇಂಗಳಗಿ, ತಾಃಕುಂದಗೋಳ, ಹಾ/ವಃಮಾಯಕಾರ ಕಾಲೋನಿ ಸಂಗೋಳ್ಳಿರಾಯಣ್ಣಗರ, ಬೈರಿದೇವರಕೊಪ್ಪ, ಹುಬ್ಬಳ್ಳಿ |
| | 3) | ಶ್ರೀಮತಿ ಸಾವಿತ್ರಿ ಕೋಂ ಬಸವಂತಪ್ಪ ಚಲವಾದಿ ವಯಾಃ 37 ವರ್ಷ , ಸಾಃಮಾಯ್ಕಾರ ಕಾಲೋನಿ, ಬೈರಿದೇವರಕೊಪ್ಪ, ಹುಬ್ಬಳ್ಳಿ |

**ದೋಷಾರೋಪಣೆ**

ನಾನು ಶ್ರೀ ರಾಘವೇಂದ್ರ ಆರ್, **ಪ್ರಭಾರೆ 3 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಹುಬ್ಬಳ್ಳಿ** ಈ ಮೂಲಕ ಕೆಳಕಂಡಂತೆ ನಿಮ್ಮನ್ನು ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ಆರೋಪಿ ನಂ. (1) ಪ್ರಜ್ವಲ ತಂದೆ ಅಡಿವೆಪ್ಪ ದೊಡ್ಡಮನಿ (ಕಾನೂನು ಸಂಘರ್ಷಕ್ಕೆ ಒಳಪಟ್ಟ), (2)ಮಂಜುನಾಥ ತಂದೆ ಬಸವಂತಪ್ಪ ಚಲವಾದಿ (ಕಾನೂನು ಸಂಘರ್ಷಕ್ಕೆ ಒಳಪಟ್ಟ) ಆದ ನೀವುಗಳು ದಿನಾಂಕ 10.10.2022 ರಂದು ಸಾಯಂಕಾಲ 4.00 ಗಂಟೆಯಿಂದ 5.00 ಗಂಟೆಯ ನಡುವಿನ ಅವಧಿಯಲ್ಲಿ ಹುಬ್ಬಳ್ಳಿ ಬೈರಿದೇವರಕೊಪ್ಪ ಮಾಯಾಕಾರ ಕಾಲೋನಿಯಲ್ಲಿರುವ ಫಿರ್ಯಾಧಿದಾರರ ಮನೆಗೆ ಹೋಗಿ ಫಿರ್ಯಾಧಿದಾರರ ಮನೆಯ ದೇವರ ಕೋಣೆಯಲ್ಲಿ ದೇವರಿಗೆ ಹಾಕಿದ್ದ ಅಂದಾಜು 35 ಗ್ರಾಂ ತೂಕದ ಅ.ಕಿ.1,39,000/- ರೂ ಬಂಗಾರದ ನೆಕ್ಲೇಸನ್ನು ಕಳ್ಳತನ ಮಾಡಿದ್ದು , ಆ ಮೂಲಕ

ಆರೋಪಿತರಾದ ನೀವುಗಳು  ಭಾರತೀಯ ದಂಡ ಸಂಹಿತೆ ಕಲಂ 380 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ , 3 ನೇ ಆರೋಪಿತಳಾದ ನೀನು ಶ್ರೀಮತಿ ಸಾವಿತ್ರಿ ಕೋಂ ಬಸವಂತಪ್ಪ ಚಲವಾದಿ, ಅದೇ ದಿವಸ ಸಾಯಂಕಾಲ 5.30 ಗಂಟೆಯ ಸುಮಾರಿಗೆ ಕಳವು ಮಾಲೆಂದು ತಿಳಿದೂ ಕೂಡಾ, ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕರಾದ ಅರೋಪಿ ನಂ.1 ಮತ್ತು 2 ನೇ ದವರಿಂದ ನಕ್ಲೇಸನ್ನು ಸ್ವಿಕರಿಸಿ, ಸದರಿ ಬಂಗಾರದ ನಕ್ಲೇಸನ್ನು ದಿನಾಂಕ 11.10.2022 ರಂದು ಸಾಯಂಕಾಲ 4.30 ಗಂಟೆಯ ಸುಮಾರಿಗೆ ಹುಬ್ಬಳ್ಳಿ ನವನಗರದಲ್ಲಿರುವ ಮಣಪೂರಂ ಫೈನಾನ್ಸ ಲಿಮಿಟೆಡದಲ್ಲಿ ಒತ್ತಿ ಇಟ್ಟು ರೂ.88,000/- ಹಣವನ್ನು ಸಾಲ ಪಡೆದಿದ್ದು , ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 411 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ.

ಮೇಲ್ಕಂಡ ದೋಷಾರೋಪಣೆಯ ಮೇಲೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಿರುತ್ತೀರೆಂದು ನಾನು ಈ ಮೂಲಕ ನಿರ್ದೇಶಿಸುತ್ತಿದ್ದೇನೆ.

ಪ್ರಶ್ನೆ ಃ  1ಃ ನಿಮಗೆ ಮೇಲೆ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ ?
ಉತ್ತರ ಃ

ಪ್ರಶ್ನೆ ಃ 2 ಃ  ಸದರಿ ದೋಷಾರೋಪಣೆಗೆ ನೀವು ನಿಮ್ಮ ತಪ್ಪು ಒಪ್ಪಿಕೊಳ್ಳುತ್ತೀರಾ
ಅಥವಾ ವಿಚಾರಣೆಯಾಗಬೇಕೇ ?
ಉತ್ತರ ಃ

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ ನಂತರ ಅವರ ಹೇಳಿಕೆಯನ್ನು ಬರೆದುಕೊಂಡಿದ್ದು, ಸದರಿ ಹೇಳಿಕೆಯು ನಿಜ ಹಾಗೂ ಸರಿ ಇದೆ ಎಂದು ಧೃಡೀಕರಿಸಿದೆ. ಹೇಳಿದ ಆರೋಪಿತರ ಹೇಳಿಕೆಯನ್ನು ನನ್ನ ಸಮಕ್ಷಮ ತೆಗೆದುಕೊಂಡಿದ್ದು ಅದು ಸತ್ಯವಾಗಿರುತ್ತದೆ ಎಂದು ಧೃಡೀಕರಿಸುತ್ತೇನೆ.)

ದಿನಾಂಕಃ 17.02.2023

(ರಾಘವೇಂದ್ರ ಆರ್.)
I/c 3 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ, ಹುಬ್ಬಳ್ಳಿ.